14.	ಬಿಜಾಪುರ	96463	23658	120121
15.	ಧಾರವಾಡ	100127	41742	141869
16.	ಉತ್ತರ ಕನ್ನಡ	23326	23147	46473
17.	ಗುಲ್ಬರ್ಗಾ	69371	35036	104407
18.	ಬೀದರ್	33040	17950	50990
19.	ಬಳ್ಳಾರಿ	80993	38096	119089
20.	ರಾಯಚೂರು	27066	64776	91842
	ಒಟ್ಟು	1152188	781816	1934004

ವಿಷಯ :- ಜುಬಾನೆ ಹಿಸ್ಸೆ ಪತ್ರಕ್ಕೆ ಖಾತೆ ಮಾಡಲು ತಡೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 911 (1322)

ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ) :- ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಗ್ರಾಮಾಂತರ ಪ್ರದೇಶದಲ್ಲಿ ಒಟ್ಟು ಕುಟುಂಬದ ಸದಸ್ಯರು ಜುಬಾನೆ ಹಿಸ್ಸೆ ಪತ್ರದ ಪ್ರಕಾರ ವಿಭಾಗ ಮಾಡಿಕೊಂಡಿದ್ದನ್ನು ಖಾತೆ ಮಾಡಬಾರದೆಂದು ಸರ್ಕಾರ ತಡೆಯಾಜ್ಞೆ ನೀಡಿರುವುದು ನಿಜವೇ? ಹಾಗಿದ್ದಲ್ಲಿ, ಈ ಆದೇಶದ ಪ್ರತಿಯನ್ನು ನೀಡಲು ಸಾಧ್ಯವೇ?

ಆ) ಇದರಿಂದ ಸಣ್ಣ ಕುಟುಂಬದವರಿಗೆ ಸಣ್ಣ ಹಿಡುವಳಿದಾರರಿಗೆ ತೊಂದರೆಯಾಗುವುದಿಲ್ಲವೇ ; ಹಾಗಿದ್ದಲ್ಲಿ ಈ ನಿಷೇಧವನ್ನು ಯಾವಾಗ ತೆರೆಯಲಾಗುವುದು?

ಶ್ರೀ ರಮೇಶ್ ಸಿ. ಜಿಗಜಿಣಗಿ (ಕಂದಾಯ ಸಚಿವರು) :-

ಅ) ಖಾತೆ ಮಾಡಬಾರದೆಂದು ಯಾವುದೇ ತಡೆಯಾಜ್ಞೆಯನ್ನು ಸರ್ಕಾರವು ನೀಡಿರುವುದಿಲ್ಲ. ಆದರೆ ಕರ್ನಾಟಕ ಮುದ್ರಾಂಕ ಅಧಿನಿಯಮ 1957 ರ ಕಲಂ-2ಕೆ) ರಂತೆ ಲಿಖಿತ ಹಿಸ್ಸೆ ಪತ್ರಗಳಿಗೆ ಮುದ್ರಾಂಕ ಶುಲ್ಕದ ಅನುಚ್ಛೇದ-39 (ಬಿ) ರಂತೆ ಮುದ್ರಾಂಕ ಶುಲ್ಕದ ಆಕರಣೆ ಮಾಡಬೇಕಾಗಿರುವುದು ಹಾಗೂ ನೋಂದಣಿ ಕಾಯ್ದೆ, 1908 ರ ಕಲಂ-17 ರಂತೆ ಅಂತಹ ಲಿಖಿತ ಹಿಸ್ಸೆ ಪತ್ರಗಳನ್ನು ಕಡ್ಡಾಯವಾಗಿ ನೋಂದಣಿ ಮಾಡಿಸಬೇಕಾಗುವುದು. ಖಾತೆ ಮಾಡುವ ಸಂಬಂಧದಲ್ಲಿ ಮುದ್ರಾಂಕ ಶುಲ್ಕ ಆಕರಣೆ ಆಗಿದೆಯೇ ಎಂಬುದರ ಬಗ್ಗೆ ಪರಿಶೀಲಿಸಲು ಸಂಬಂಧಪಟ್ಟ ಅಧಿಕಾರಿಯ ಕರ್ತವ್ಯವಾಗಿರುತ್ತದೆ ಎಂದು ನೋಂದಣಿ ಮಹಾ ಪರಿವೀಕ್ಷರು ತಮ್ಮ ದಿನಾಂಕ : 13-2-96 ರ ಸುತ್ತೋಲೆಯಲ್ಲಿ ಸೂಚಿಸಿರುತ್ತಾರೆ. (ಪ್ರತಿ ಲಗತ್ತಿಸಿದೆ).

ಅ) ಇದು ಕಾನೂನು ಪ್ರಕಾರ ಮಾಡಬೇಕಾದ ಕ್ರಮವಾದ್ದರಿಂದ ಮತ್ತು ರೈತರಿಗೆ ಸರಿಯಾದ ರೀತಿ ಹಕ್ಕು ಬರಬೇಕಾದರೆ ಮೇಲಿನ ಕ್ರಮವನ್ನು ಅನುಸರಿಸಬೇಕಾದ ಕಾರಣ, ಯಾವುದೇ ತೊಂದರೆ ಆಗುವುದಿಲ್ಲ. ಕಾನೂನಿನ ಅಂಶಗಳನ್ನು ಪರಿಪಾಲನೆ ಮಾಡಬೇಕೆಂದು ಹೊರಡಿಸಿರುವ ಸುತ್ತೋಲೆಯಾದ್ದರಿಂದ, ಅದನ್ನು ಹಿಂತೆಗೆದುಕೊಳ್ಳುವುದು ಸೂಕ್ತವಲ್ಲ.

ಕರ್ನಾಟಕ ಸರ್ಕಾರ

ಸಂಖ್ಯೆ : ಎಸ್.ಟಿ.ಡಿ : 119 : 94-95

ನೋಂದಣಿ ಮಹಾಪರಿವೀಕ್ಷಕರು ಮತ್ತು ಮುದ್ರಾಂಕಗಳ ಆಯುಕ್ತರವರ ಕಛೇರಿ ಜಲಮಂಡಳಿ ವಿಭಾಗ, ಕಾವೇರಿ ಭವನ 7ನೇ ಮಹಡಿ, ಬೆಂಗಳೂರು-9.
ದಿನಾಂಕ 13-02-1996.

"ಸುತ್ತೋಲೆ"

ವಿಷಯ :- ಅವಿಭಕ್ತ ಕುಟುಂಬದ ಸ್ಥಿರಾಸ್ಥಿಯನ್ನು ಕರ್ನಾಟಕ ಮುದ್ರಾಂಕ ಅಧಿನಿಯಮ, 1957 ರ ಮುಂದ್ರಾಕ ಶುಲ್ಕದ ಅನುಚ್ಛೇದ 39 ರಂತೆ ಮುದ್ರಾಂಕ ಶುಲ್ಕ ತುಂಬದೆ ವಿಭಜಿಸಿಕೊಂಡ ಸ್ವತ್ತುಗಳ ಖಾತೆ ಬದಲಾವಣೆ ಕುರಿತು.

ನೋಂದಣಿ ಮತ್ತು ಮುದ್ರಾಂಕಗಳ ಇಲಾಖೆಯ ಹಲವು ಅಧಿಕಾರಿಗಳು ಕೆಲ ಪುರಸಭೆ : ನಗರ ಪಾಲಿಕೆಗಳ ತಪಾಸಣೆ ಸಮಯದಲ್ಲಿ ಸಾರ್ವಜನಿಕರು ತಮ್ಮ ಸ್ಥಿರಾಸ್ಥಿಯನ್ನು ಕುಟುಂಬದ ಕರ್ತನೊಂದಿಗೆ ಆಗಲಿ ಅವರ ಮರಣಾನಂತರವೇ ಆಗಲಿ ಹಂಚಿಕೆ ಮಾಡಿಕೊಂಡ ಬಗ್ಗೆ ನೀಡಿದ "ಲಿಖಿತ ಪತ್ರ"ದ ಮೇರೆಗೆ ಖಾತೆಯನ್ನು ಕುಟುಂಬದ ಸಹ ಮಾಲೀಕರ ಹೆಸರಿಗೆ ಪ್ರತ್ಯೇಕವಾಗಿ ಬದಲಾವಣೆ ಮಾಡಿರುವುದು ಕಂಡು ಬಂದಿದ್ದು, ಇಂತಹ "ಲಿಖಿತ ಪತ್ರ"ಗಳಿಗೆ ಶಾಸನ ಬದ್ಧ ಮುದ್ರಾಂಕ ಶುಲ್ಕ ಪಡೆಯದಿರುವ ಕಾರಣ ಸರ್ಕಾರಕ್ಕೆ ಹೇರಳವಾಗಿ ರಾಜಸ್ವದ ನಷ್ಟ ಉಂಟಾಗುತ್ತಿರುವುದನ್ನು ಇಲಾಖೆಯ ಗಮನಕ್ಕೆ ತಂದಿರುತ್ತಾರೆ. ಅವಿಭಕ್ತ ಕುಟುಂಬದ ಕರ್ತನ ಮರಣಾನಂತರ ಕುಟುಂಬದ ಆಸ್ತಿಯನ್ನು ಸಹ ಮಾಲೀಕರಿಗೆ ಜಂಟಿ ಖಾತೆಯಲ್ಲಿ ಇಡಲು ಮಾತ್ರ ಅವಕಾಶವಿದ್ದು, ಕುಟುಂಬದ ಸಹ ಮಾಲೀಕರಿಗೆ ಆಸ್ತಿಯನ್ನು ಬೇರೆ ಬೇರೆಯಾಗಿ "ಗಡಿಯನ್ನು ಗುರುತಿಸುವಿಕೆ" (FIXING BOUNDRY) ಮೂಲಕ ವಿಭಜಿಸಿ ಪ್ರತ್ಯೇಕ ಖಾತೆಯನ್ನು ನಮೂದಿಸುವುದು ಮುಂದ್ರಾಕ ಕಾಯ್ದೆ ಮತ್ತು ನೋಂದಣಿ ಕಾಯ್ದೆಯ ಉಲ್ಲಂಘನೆಯಾಗುವುದಲ್ಲದೆ, ರಾಜ್ಯದ ಬೊಕ್ಕಸಕ್ಕೆ ಕೂಡ ರಾಜಸ್ವ ನಷ್ಟ ಉಂಟಾಗುವುದು.

ಕರ್ನಾಟಕ ಮುದ್ರಾಂಕ ಅಧಿನಿಯಮ, 1957 ರ ಕಲಂ 2 (ಕೆ) ಸೂತ್ರದಲ್ಲಿ ವಿವರಿಸಿರುವಂತಹ ವಿಭಾಗ ಪತ್ರದಲ್ಲಿ ಒಳಗೊಂಡ ಅವಿಭಕ್ತ ಕುಟುಂಬದ ಸ್ಥಿರಾಸ್ಥಿಯ ಮೌಲ್ಯವು 100 ರೂ. ಗಳಿಗೆ ಮೀರಿದ್ದಲ್ಲಿ ಅಂತಹ "ಲಿಖಿತ ಪತ್ರ" ವನ್ನು ನೋಂದಣಿ ಅಧಿನಿಯಮ, 1908 ರ ಕಲಂ 17 ರ ಪ್ರಕಾರ ಖಡ್ಡಾಯವಾಗಿ ನೋಂದಣಿ ಮಾಡಿಸಬೇಕಾಗಿರುತ್ತದೆ. ವಿಭಾಗಕ್ಕೊಳಪಟ್ಟ ಸ್ಥಿರಾಸ್ಥಿಯು ಕೃಷಿ ಭೂಮಿಯಾಗಿದ್ದರೆ, ಕರ್ನಾಟಕ ಮುಂದ್ರಾಕ ಅಧಿನಿಯಮ, 1957 ರ ಮುದ್ರಾಂಕ ಶುಲ್ಕದ ಅನುಚ್ಛೇದ 39 (ಬಿ) ರಂತೆ ಅಂತಹ ಭೂಮಿಯು 30 ವರ್ಷಗಳಿಗೂ ಮೀರದಂತೆ ಕಂದಾಯ ವ್ಯವಸ್ಥೆಗೆ (ಸೆಟ್ಲ್‌ಮೆಂಟ್) ಒಳಪಟ್ಟಿದ್ದಲ್ಲಿ ಮಾತ್ರ ಶೇಕಡ 25 ರಷ್ಟು ಆ ಭೂಮಿಯ ಕಂದಾಯ ನಿರ್ಧರಣೆಯ ಮೊತ್ತದ ಮೇಲೆ ಮುದ್ರಾಂಕ ಶುಲ್ಕ ಆಕರಿಸಬೇಕಾಗಿರುತ್ತದೆ. ಕೃಷಿ ಭೂಮಿ ಹೊರತುಪಡಿಸಿ ಇನ್ನಿತರೆ ಸ್ಥಿರಾಸ್ಥಿಗಳಿಗೆ ಅವುಗಳ ಮಾರುಕಟ್ಟೆ ಮೌಲ್ಯದ ಮೇಲೆ ಅನುಚ್ಛೇದ 39 ರಂತೆ ಮುದ್ರಾಂಕ ಶುಲ್ಕ ಆಕರಿಸಬೇಕಾಗಿರುತ್ತದೆ.

ಸ್ಥಿರಾಸ್ಥಿಯ ವಿಭಜನೆಯನ್ನು ಆಸ್ತಿಯ ಗಡಿ ಗುರುತುಪಡಿಸಿಕೊಳ್ಳುವುದರ ಮೂಲಕ ಹಂಚಿಕೆ ಮಾಡಿಕೊಳ್ಳುವುದನ್ನು "ಲಿಖಿತ ಪತ್ರ"ದ ಮೂಲಕ ಏರ್ಪಾಡು ಮಾಡಿ ಕೊಂಡಾಗ್ಗೆ ಅದನ್ನು ನೋಂದಣಿ ಕಾಯ್ದೆ, 1908 ರ ರೀತ್ಯ ಖಡ್ಡಾಯವಾಗಿ ನೋಂದಣಿ ಯಾಗಲೇಬೇಕಾಗಿರುತ್ತೆ. ಇಲ್ಲವಾದಲ್ಲಿ ನೋಂದಣಿ ಕಾಯ್ದೆ 190 ರ ಕಲಂ 49 ರ ಅರ್ಥದ ವ್ಯಾಪ್ತಿಯಲ್ಲಿ ಯಾವುದೇ ಸಾರ್ವಜನಿಕ ಅಧಿಕಾರಿಯು ಅಂತಹ "ಲಿಖಿತ ಪತ್ರ" ವನ್ನು ಸಾಕ್ಷ್ಯವೆಂದು ಪರಿಗಣಿಸಕ್ಕಾಗಲೀ ಹಾಗೂ ಅದರ ಆಧಾರದ ಮೇಲೆ ಕ್ರಮ ಜರುಗಿಸುವುದಾಗಲೀ ಅವಕಾಶವಿರುವುದಿಲ್ಲ, ಅಂತೆಯೇ ಕರ್ನಾಟಕ ಮುದ್ರಾಂಕ ಅಧಿನಿಯಮ 1957 ರ ಮುದ್ರಾಂಕ ಶುಲ್ಕ ಅನುಚ್ಛೇದ 39 ರಂತೆ ಮುದ್ರಾಂಕ ಶುಲ್ಕ ಪಾವತಿ ಮಾಡದಿದ್ದಲ್ಲಿ ಇದೇ ಕಾಯ್ದೆಯ ಕಲಂ 34 ರಂತೆ ಯಾವುದೇ ಸಾರ್ವಜನಿಕ ಅಧಿಕಾರಿಯು ಅಂತಹ ಲಿಖಿತ ಪತ್ರ (ವಿಭಾಗ)ದ ಮೇಲೆ ಕ್ರಿಯೆ ಜರುಗಿಸುವುದಾಗಲೀ (Act up on) ಕಾಯಿದೆ ವಿರೋಧಿಯಾಗುವುದು. ಆದ್ದರಿಂದ ಇಂತಹ ದಸ್ತಾವೇಜುಗಳು ಯಾವುದೇ ಸಾರ್ವಜನಿಕ ಅಧಿಕಾರಿಯ ಕರ್ತವ್ಯ ನಿರ್ವಹಣೆ ಸಮಯದಲ್ಲಿ ಅವರ ಮುಂದೆ ಬಂದಾಗ್ಗೆ ಕರ್ನಾಟಕ ಮುದ್ರಾಂಕ ಅಧಿನಿಯಮ, 1957 ರ ಕಲಂ 33 ರಡಿಯಲ್ಲಿ ಇಂಡಾಂಡ್ ಮಾಡಿ ಮುದ್ರಾಂಕಗಳ ಡೆಪ್ಯೂಟಿ ಕಮೀಷನರ್‌ರವರಾದ ಆಯಾ ಜಿಲ್ಲಾ ನೋಂದಣಾಧಿಕಾರಿಗಳಿಗೆ ನ್ಯಾಯ ನಿರ್ಣಯಕ್ಕಾಗಿ ಕಳುಹಿಸಲು ಸೂಚಿಸಿದೆ.

ಕರ್ನಾಟಕ ಭೂ ಕಂದಾಯ ಅಧಿನಿಯಮ, 1964 ರ ಉಪಬಂಧದಲ್ಲಿ ಒಳಗೊಂಡಿರುವ ರಿಯಾಯಿತಿಯನ್ನು ಹೊರತುಪಡಿಸಿ ಇನ್ನಿತರ ಪ್ರಕರಣಗಳಲ್ಲಿ ಕಂದಾಯ ಅಧಿಕಾರಿಗಳು ತಮ್ಮ ಕರ್ತವ್ಯ ನಿರ್ವಹಣೆ ಸಮಯದಲ್ಲಿ ಇಂತಹ ಲಿಖಿತ ಪತ್ರಗಳಿಗೆ ಮುಂದಿನ ಕ್ರಮ ಜರುಗಿಸಿ ಮ್ಯುಟೇಷನ್ ಬದಲಾವಣೆ ಮಾಡುವ ಮುನ್ನ ಸಂಬಂಧಪಟ್ಟ ವ್ಯಕ್ತಿಗಳು ಕರ್ನಾಟಕ ಮುದ್ರಾಂಕ ಅಧಿನಿಯಮ, 1957 ರ ಮುದ್ರಾಂಕ ಶುಲ್ಕದ ಅನುಸೂಚಿಯ ಅನುಚ್ಛೇದ 39 ರಂತೆ ಸರಿಯಾದ ಮುದ್ರಾಂಕ ಶುಲ್ಕ ಪಾವತಿಸಿರುವರೇ

ಹೇಗೆಂದು ಹಾಗೂ ನೋಂದಣಿ ಅಧಿನಿಯಮ, 1908 ರ ಕಲಂ 17 (2) ರಂತೆ ನೋಂದಣಿಯಾಗಿದೆಯೇ ಎಂಬುದನ್ನು ಖಚಿತಪಡಿಸಿಕೊಂಡು ಹೆಚ್ಚಿನ ರಾಜಸ್ವಕ್ಕೆ ಅನುಕೂಲವಾಗುವಂತೆ ಮುಂದಿನ ಕ್ರಮ ಜರುಗಿಸಲು ನಿರ್ದೇಶಿಸಲಾಗಿದೆ.

ಸಹಿ :-
(ವಿನಯಕುಮಾರ್) 15-2-96
ನೋಂದಣಿ ಮಹಾಪರಿವೀಕ್ಷಕರು ಮತ್ತು
ಮುದ್ರಾಂಕಗಳ ಆಯುಕ್ತರು ಹಾಗೂ
ಮುಖ್ಯ ನಿಯಂತ್ರಕ ರಾಜಸ್ವ ಪ್ರಾಧಿಕಾರಿಗಳು,
ಕರ್ನಾಟಕ, ಬೆಂಗಳೂರು.

ಪ್ರತಿಯನ್ನು :-

1. ರಾಜ್ಯದ ಎಲ್ಲಾ ನಗರಪಾಲಿಕೆ : ಪುರಸಭೆಗಳ ಮುಖ್ಯಾಧಿಕಾರಿಗಳಿಗೆ ಸೂಕ್ತ ತಿಳುವಳಿಕೆ ಮತ್ತು ಕ್ರಮಕ್ಕಾಗಿ ರವಾನಿಸಿದೆ.
2. ತಾಲ್ಲೂಕು : ತಹಸಿಲ್ದಾರ್‌ಗಳಿಗೆ ಸೂಕ್ತ ತಿಳುವಳಿಕೆ ಮತ್ತು ಕ್ರಮಕ್ಕಾಗಿ ರವಾನಿಸುತ್ತಾ ತಮ್ಮ ಅಧೀನ ಕಂದಾಯ ಅಧಿಕಾರಿಗಳು : ಗ್ರಾಮಲೆಕ್ಕಾಧಿಕಾರಿಗಳಿಗೆ ಈ ಬಗ್ಗೆ ಸೂಕ್ತ ರೀತಿಯಲ್ಲಿ ತಿಳುವಳಿಕೆ ನೀಡಲು ಸೂಚಿಸಿದೆ.
3. ತಾಲ್ಲೂಕು ಪಂಚಾಯಿತಿಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ರವಾನಿಸುತ್ತಾ ತಮ್ಮ ಅಧೀನದ ಗ್ರಾಮ ಪಂಚಾಯಿತಿ : ಪರಿವರ್ತಿತ ಗ್ರಾಮಪಂಚಾಯಿತಿ ಕಾರ್ಯದರ್ಶಿಗಳಿಗೆ ಈ ಬಗ್ಗೆ ಸೂಕ್ತ ತಿಳುವಳಿಕೆ ನೀಡಲು ಸೂಚಿಸಿದೆ.

ಕರ್ನಾಟಕ ಸರ್ಕಾರ

ಸಂಖ್ಯೆ : ಎಸ್.ಟಿ.ಡಿ : 119 : 94-95

ನೋಂದಣಿ ಮಹಾಪರಿವೀಕ್ಷಕರು ಮತ್ತು
ಮುದ್ರಾಂಕಗಳ ಆಯುಕ್ತರವರ ಕಛೇರಿ
ಜಲಮಂಡಳಿ ವಿಭಾಗ, ಕಾವೇರಿ ಭವನ
7ನೇ ಮಹಡಿ, ಬೆಂಗಳೂರು-9.
ದಿನಾಂಕ 1-07-1996.

ತಿದ್ದುಪಡಿ

ವಿಷಯ : ಅವಿಭಕ್ತ ಕುಟುಂಬದ ಸ್ಥಿರಾಸ್ತಿಯನ್ನು ಕರ್ನಾಟಕ ಮುದ್ರಾಂಕ ಅಧಿನಿಯಮ, 1957 ರ ಮುದ್ರಾಂಕ ಶುಲ್ಕದ ಅನುಚ್ಛೇದ 39 ರಂತೆ ಮುದ್ರಾಂಕ ಶುಲ್ಕ ತುಂಬದೆ ವಿಭಜಿಸಿಕೊಂಡ ಸ್ವತ್ತುಗಳ ಖಾತೆ ಬದಲಾವಣೆ ಕುರಿತು.

ಉಲ್ಲೇಖ : ಈ ಕಛೇರಿಯ ಇದೇ ಸಮ ಸಂಖ್ಯೆಯ ಸುತ್ತೋಲೆಯ ದಿನಾಂಕ 13-2-96.

ಉಲ್ಲೇಖಿತ ಸುತ್ತೋಲೆಯ ಕಡೆ ಗಮನ ಸೆಳೆಯುತ್ತಾ, ಸದರಿ ಸುತ್ತೋಲೆಯ 2ನೇ ಪ್ಯಾರಾದಲ್ಲಿ "ಮಾತ್ರ ಶೇಕಡಾ 25 ರಷ್ಟು ಆ ಭೂಮಿಯ ಕಂದಾಯ ನಿರ್ಧರಣೆಯ" ಎಂಬ ಈ ಶಬ್ದಗಳ ಬದಲಿ "ಆ ಭೂಮಿಯ ವಾರ್ಷಿಕ ಕಂದಾಯ ಇಪ್ಪತ್ತೆದು ಪಟ್ಟು" ಎಂಬ ಶಬ್ದಗಳನ್ನು ತಾರೀಖು 13-2-96 ರಿಂದ ಜಾರಿಗೆ ಬಂದಿದೆ ಎಂದು ತಿದ್ದುಪಡಿ ಮಾಡಿಕೊಂಡು ಓದತಕ್ಕದ್ದು.

ಸಹಿ :-
(ವಿ. ಎನ್. ತಿಪ್ಪನಗೌಡ)
ಸಹಾಯಕ ನೋಂದಣಿ ಮಹಾಪರಿವೀಕ್ಷಕರು
(ಆಡಳಿತ) ಪರವಾಗಿ, ಬೆಂಗಳೂರು.

ಪ್ರತಿಯನ್ನು :-

1. ರಾಜ್ಯದ ಎಲ್ಲಾ ನಗರಪಾಲಿಕೆ : ಪುರಸಭೆಗಳ ಮುಖ್ಯಾಧಿಕಾರಿಗಳಿಗೆ ಸೂಕ್ತ ತಿಳುವಳಿಕೆ ಮತ್ತು ಕ್ರಮಕ್ಕಾಗಿ ರವಾನಿಸಿದೆ.

2. ತಾಲ್ಲೂಕು : ತಹಸಿಲ್ದಾರ್‌ಗಳಿಗೆ ಸೂಕ್ತ ತಿಳುವಳಿಕೆ ಮತ್ತು ಕ್ರಮಕ್ಕಾಗಿ ರವಾನಿಸುತ್ತಾ ತಮ್ಮ ಅಧೀನ ಕಂದಾಯ ಅಧಿಕಾರಿಗಳು : ಗ್ರಾಮಲೆಕ್ಕಾಧಿಕಾರಿಗಳಿಗೆ ಈ ಬಗ್ಗೆ ಸೂಕ್ತ ರೀತಿಯಲ್ಲಿ ತಿಳುವಳಿಕೆ ನೀಡಲು ಸೂಚಿಸಿದೆ.

3. ತಾಲ್ಲೂಕು ಪಂಚಾಯಿತಿಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ರವಾನಿಸುತ್ತಾ ತಮ್ಮ ಅಧೀನದ ಗ್ರಾಮ ಪಂಚಾಯಿತಿ : ಪರಿವರ್ತಿತ ಗ್ರಾಮಪಂಚಾಯಿತಿ ಕಾರ್ಯದರ್ಶಿಗಳಿಗೆ ಈ ಬಗ್ಗೆ ಸೂಕ್ತ ತಿಳುವಳಿಕೆ ನೀಡಲು ಸೂಚಿಸಿದೆ.

ವಿಷಯ :- ಅಂಗನವಾಡಿ ಮೇಲ್ವಿಚಾರಕಿಯರ ಹುದ್ದೆಗಳ ಭರ್ತಿ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ 913 (1185)

ಶ್ರೀ ಬಿ. ಎಸ್. ಯಡಿಯೂರಪ್ಪ (ಶಿಕಾರಿಪುರ) :- ಮಾನ್ಯ ಮಹಿಳಾ ಹಾಗೂ ಮಕ್ಕಳ ಅಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅಂಗನವಾಡಿ ಮೇಲ್ವಿಚಾರಕಿ ಹುದ್ದೆಗಳನ್ನು ತುಂಬಲು ಈ ಹಿಂದೆ ಅರ್ಜಿ ಕರೆದಿದ್ದು ಪುನಃ ಅರ್ಜಿ ಕರೆಯಲಾಗಿದೆ ಇದರ ಔಚಿತ್ಯವೇನು, ಈ ಹುದ್ದೆಗಳನ್ನು ಯಾವಾಗ ಭರ್ತಿ ಮಾಡಲಾಗುವುದು.

ಶ್ರೀಮತಿ ವಿಮಲಬಾಯಿ ದೇಶ್‌ಮುಖ್ (ಮಹಿಳಾ ಹಾಗೂ ಮಕ್ಕಳ ಕಲ್ಯಾಣ ರಾಜ್ಯ ಸಚಿವರಿಂದ ಅನುಮೋದಿಸಲ್ಪಟ್ಟಿದೆ) :-